ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ರೇಸಕೋರ್ಸನ್ನು ಶಿಫ್ಟ್ ಮಾಡುವ ಬಗ್ಗೆ ೧೯೮೨ರಲ್ಲಿ ನಿರ್ಣಯ ತೆಗೆದುಕೊಂಡಿದ್ದರೂ ೯೦ನೇ ಇಸವಿ ಬಂದರೂ ಇದುವರೆಗೆ ಏತಕ್ಕೆ ಇದನ್ನು ಶಿಫ್ಟ್ ಮಾಡಲಿಲ್ಲ. ಯಲಹಂಕಕ್ಕೆ ಶಿಫ್ಟ್ ಮಾಡುವ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿತ್ತು, ಇದರ ಹಿಂದೆ ಬಹಳಷ್ಟು ಪ್ರಭಾವಿ ಶಾಲಿಗಳು ಇದ್ದಾರೆ. ಅವರಿಗೆ ಆಸ್ಪದ ಕೊಡದೆ ರೇಸ್‌ಕೋರ್ಸನ್ನು ಬೆಂಗಳೂರು ನಗರದಿಂದ ಹೊರಗಡೆ ಹಾಕಿದರೆ ಬಹಳಷ್ಟು ಸಂಸಾರಗಳು ಉದ್ಧಾರವಾಗುತ್ತವೆ. ಇದರಿಂದ ಬಹಳಷ್ಟು ಮನೆಗಳು ಹಾಳಾಗಿ ಹೋಗಿವೆ.

ಅಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ರೇಸಕೋರ್ಸ್ ಯಾವಾಗ ಶಿಫ್ಟ್ ಮಾಡುತ್ತೀರಾ ಎಂದು ಕೇಳುತ್ತೇನೆ.

SRI M. RAJASHEKHARA MURTHY.—The whole matter requires re-examination.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ರೇಸಕೋರ್ಸನ್ನು ಸರ್ಕಾರ ಶಿಫ್ಟ್ ಮಾಡಿ, ಆ ಜಾಗದಲ್ಲಿ ಮಕ್ಕಳ ಮನರಂಜನಾ ಉದ್ಯಾನವನ, ೨೫% ಸಿಟಿ ಬಸ್ ಟರ್ಮಿನಲ್ ಮಾಡಿದರೆ 25% parking slot, ಬೆಂಗಳೂರಿನ ಜನತೆಗೆ ಒಳ್ಳೆಯದಾಗುತ್ತದೆ. ಇದರ ಬಗ್ಗೆ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ.

SRI M. RAJASHEKARA MURTHY.—This question arises only when the Government re-examined the whole question and taken a decision.

ಶ್ರೀ ವಾಟಾಳ್ ನಾಗರಾಜ್.—ಅವರು ಕನ್ನಡ, ನೀವು ಇಂಗ್ಲೀಷ್.

## ಮಾಲೂರಿನಲ್ಲಿ ಕ.ರಾ.ರ.ಸಾ. ಸಂಸ್ಥೆಯ ಡಿಪೋದ ನಿರ್ಮಾಣ

೨೨೫. ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಲೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಕಟ್ಟುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಕಟ್ಟಡದ ಕೆಲಸ ಪ್ರಾರಂಭವಾಗುವುದು ಮತ್ತು ಪೂರ್ತಿಗೊಳ್ಳುವುದು?

ಶ್ರೀ ಕೆ. ಜೆ. ಜಾರ್ಜ್ (ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು).—

ಅ) ಸಧ್ಯಕ್ಕೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ. ನಾಗರಾಜು.—ಸ್ವಾಮಿ, ನನ್ನ ಮೊದಲನೆಯ ಪ್ರಶ್ನೆಗೆ ಮಂತ್ರಿಗಳು 'ಇಲ್ಲ' ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಮಾಲೂರಿಗೆ ಬಂದಾಗ ಸ್ಥಳಪರೀಲನೆ ಮಾಡಿ ಬಂದಿರುವುದು ಕೂಡ ಪತ್ರಿಕೆಗಳಲ್ಲಿ ಬಂದಿತ್ತು. ಮಾಲೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಆಗುತ್ತದೆ ಎಂದು ಜನರಿಗೆ ಆಶ್ವಾಸನೆ ಕೊಟ್ಟಿ ಬಂದಿದ್ದಾರೆ. ಆದರೆ, ಉತ್ತರದಲ್ಲಿ ಸಧ್ಯಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಮುಂದಿನ ಹಣಕಾಸಿನ ವರ್ಷದಲ್ಲಿ ಮಾಲೂರಿಗೆ ಒಂದು ಡಿಪೋ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜೆ. ಜಾರ್ಜ್,—ಮುಂದೆ, ಮಾಲೂರಿನಲ್ಲಿ ಕೆ. ಎಸ್. ಆರ್. ಟಿ. ಸಿ. ಡಿಪೋಗೆ ಜಾಗ ಬೇಕಾಗಬಹುದೆಂದು, ೧೦ ಎಕರೆ ಜಾಗ ನೋಡಲು ಜಿಲ್ಲಾಧಿಕಾರಿಗಳಿಗೆ, ಮತ್ತು ಡಿವಿಜನಲ್ ಕಂಟ್ರೋಲರಿಗೆ ಆದೇಶ ಕೊಟ್ಟಿದ್ದೇವೆ. ಈಗ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಕಷ್ಟದಲ್ಲಿದೆ, ಮುಂದೆ ಸುಧಾರಿಸಿದ ಮೇಲೆ ಆದ್ಯತೆ ಮೇಲೆ ಕೊಡುವುದಕ್ಕೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.